ಈ) ಚಿಲ್ಲರೆ ಮದ್ಯ ಮಾರಾಟದ ಅಂಗಡಿಗಳಲ್ಲಿ ಮದ್ಯವನ್ನು ಬಿಡಿಯಾಗಿ ಮಾರಾಟ ಮಾಡುವ ಬಗ್ಗೆ ದೂರುಗಳು ಬಂದಾಗಲೆಲ್ಲ ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ

ಸನ್ನದ್ದು ಮಂಜೂರಾತಿಗಾಗಿ ಅನುಸರಿಸಬೇಕಾದ ನಿಯಮಗಳು

1. ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶೀಯ ಮದ್ಯ ಮಾರಾಟ) ನಿಯಮಗಳು 1968 ರ ಅಡಿಯಲ್ಲಿ ಸನ್ನದು ಪಡೆಯಲಿಚ್ಚಿಸುವವರು ಈ ನಿಯಮಗಳ ನಿಯಮ 4 ರಲ್ಲಿ ಸೂಚಿಸಿರುವ ನಮೂನೆ ಸಿ ಎಲ್-ಎ 1 ರಲ್ಲಿ ಅರ್ಜಿಯನ್ನು ಹಾಗೂ ನಿಯಮ 9ರ ಅನ್ವಯ ಮದ್ಯದ ಬ್ರಾಂಡ್ ಲಿಸ್ಟ್‌ನ್ನು ಸಂಬಂಧಪಟ್ಟ ದಾಖಿಲಾತಿಗಳೊಂದಿಗೆ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
2. ಹಾಗೂ ಅವರ ಯಾವ ವಿಧವಾದ ಸನ್ನದನ್ನು ಪಡೆಯಲಿಚ್ಚಿಸುವರೊ ಆ ಸನ್ನದಿಗೆ ಪ್ರದೇಶ ವ್ಯಾಪ್ತಿಗೆ ಅನುಗುಣವಾಗಿ ನಿಗಧಿಪಡಿಸಿರುವ ಸನ್ನದು ಶುಲ್ಕ ಹಾಗೂ ಹೆಚ್ಚುವರ ಸನ್ನದು ಶುಲ್ಕವನ್ನು ಸಂದಾಯ ಮಾಡತಕ್ಕದ್ದು.
3. ಸನ್ನದು ನಡೆಸಲು ನಿಯೋಜಿಸಿರುವ ಸ್ಥಳವು ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳ) 1967 ರ ನಿಯಮ 5ರ ರೀತ್ಯಾ ಅನಾಕ್ಷೇಪಣಾ ಸ್ಥಳದಲ್ಲಿ ಇರಬೇಕು.

   ನಿಯೋಜಿತ ಸ್ಥಳಕ್ಕೆ ಸನ್ನದು ಮಂಜೂರು : ನವೀಕರಿಸುವ ಮುನ್ನ ಸಂಬಂಧ ಪಟ್ಟ ವಲಯಾಧಿಕಾರಿಗಳು ನಿಯೋಜಿತ ಸ್ಥಳವು ಅನಾಕ್ಷೇಪಣಾ ಸ್ಥಳದಲ್ಲಿ ಇದೆಯೇ ಎಂಬ ಬಗ್ಗೆ ಮಹಜರ್ ನಡೆಸಿ ಸಾರ್ವಜನಿಕರಿಂದ ನಿರಾಕ್ಷೇಪಣೆ -ಯನ್ನು ಪಡೆದು ಸದರಿ ಸ್ಥಳಕ್ಕೆ ಸನ್ನದು ನೀಡಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುತ್ತಾರೆ.
4. ಜಿಲ್ಲಾಧಿಕಾರಿಗಳು ಬಂದಿರುವ ದಾಖಿಲಾತಿಗಳನ್ನು ಪರಿಶೀಲಿಸಿ, ಅವಶ್ಯವಿದ್ದಲ್ಲಿ ಅಬಕಾರಿ ಉಪ ಆಯುಕ್ತರಿಂದ ಸ್ಥಳ ತನಿಖೆ ನಡೆಸಿ ಅಬಕಾರಿ ಆಯುಕ್ತರ ಪೂರ್ವಾನುಮತಿ ಪಡೆದು ಸನ್ನದು ನೀಡುತ್ತಾರೆ.

ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಪಡೆದ ಕಟ್ಟಡ ಲೈಸನ್ಸ್ ನಿಯಮಾವಳಿಗಳ ಉಲ್ಲಂಘನೆ

1553 (1966) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಡೆದ ಬಿಲ್ಡಿಂಗ್ ಲೈಸೆನ್ಸ್ ಹಾಗೂ ಕಟ್ಟಡ ಕಟ್ಟುವಲ್ಲಿನ ನಿಯಮಾವಳಿಗಳು ಉಲ್ಲಂಘನೆಯಾಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಗರಾಭಿವೃದ್ಧಿ ಪ್ರಾಧಿಕಾರಿಗಳು ಲೈಸೆನ್ಸ್ ಹಾಗೂ ಕಟ್ಟಡದ ನಿಯಮಾವಳಿಗಳ ಉಲ್ಲಂಘನೆಯನ್ನು ತಡೆಯಲು ಪ್ರಾಧಿಕಾರಿಗಳು ವಿಫಲವಾಗುತ್ತಾ ಇರುವುದನ್ನು ಸರ್ಕಾರ ಮನಗಂಡಿದೆಯೇ?

ಇ) ಈ ವಿಫಲತೆಯಿಂದಾಗಿ ನಗರಗಳು ಅಸ್ತವ್ಯಸ್ತವಾಗಿ ಬೆಳೆಯುತ್ತಾ ಇರುವುದನ್ನು ಸರ್ಕಾರವು ಅರಿತಿದೆಯೇ?

ಈ) ಹಾಗಿದ್ದಲ್ಲಿ, ಈ ವಿಫಲತೆಗಳಿಗೆ ಕಾರಣವೇನು?

ಉ) ಈ ಉಲ್ಲಂಘನೆಗಳನ್ನು ತಡೆಯುವ ದಿಸೆಯಲ್ಲಿ ಸರ್ಕಾರ ಯಾವ ರೀತಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಬಲಗೊಳಿಸುವುದು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು

ಆ) ಹೌದು

ಇ) ಹೌದು

ಈ) ಈಗಾಗಲೇ ಈ ರೀತಿ ಕಟ್ಟಡಗಳ ನಿರ್ಮಾಣಗಳಲ್ಲಿ ಉಲ್ಲಂಘನೆ ಮಾಡಬಾರದಾಗಿ ನಿಯಮಗಳಲ್ಲಿ ಸೂಚಿಸಲಾಗಿದೆ. ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಜನಸಾಮಾನ್ಯರಲ್ಲಿ ಹೆಚ್ಚಿನ ತಿಳುವಳಿಕೆ ಹಾಗೂ ಜವಾಬ್ದಾರಿ ಬರಬೇಕಾಗಿದೆ. ಅಲ್ಲದೆ ಸಿಬ್ಬಂದಿ ಕೊರತೆಯೂ ಸಹ ಒಂದಾಗಿದೆ.

ಉ) ಕಾನೂನು ಅವಕಾಶವನ್ನು ಉಪಯೋಗಿಸಿಕೊಂಡು ಉಲ್ಲಂಘನೆಯನ್ನು ತಡೆಗಟ್ಟಲು ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಲಾಗಿದೆ. ಇದರ ಜೊತೆಗೆ ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ ನಮೂನೆಯಲ್ಲಿ ರಾಜ್ಯ ಮಟ್ಟದಲ್ಲಿಯೂ ಸಹ ಒಂದು ಕಾರ್ಯಚರಣೆ ಪಡೆಯನ್ನು ರಚಿಸಲು ಸರ್ಕಾರವು ಚಿಂತಿಸುತ್ತಿದೆ.

ಕೆ.ಜಿ.ಎಫ್ ವಿಧಾನ ಸಭಾ ಕ್ಷೇತ್ರದಲ್ಲಿ ನಡೆದಿರುವ ಅಪರಾಧಗಳು

1555 (1961) ಶ್ರೀ ಎಂ. ಭಕ್ತವತ್ಸಲಂ (ಕೆ.ಜಿ.ಎಫ್) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ.ಎಫ್ ವಿಧಾನ ಸಭಾ ಮತಕ್ಷೇತ್ರದಲ್ಲಿ 1999-2000, 2000-2001 ಹಾಗೂ 2001 ರಿಂದ ಇಂದಿನವರೆಗೆ ನಡೆದಿರುವ ಒಟ್ಟು ಅಪರಾಧಗಳೆಷ್ಟು; (ವರ್ಗವಾರು ವಿವರಗಳನ್ನು ನೀಡುವುದು)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಕೆ.ಜಿ.ಎಫ್. ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ದಾಖಲಾದ ಮೊಕದ್ದಮೆಗಳ ವಿವರಗಳು ಈ ಕೆಳಕಂಡಂತಿರುತ್ತದೆ.

1)	1999-2000	:	482 ಪ್ರಕರಣಗಳು
2)	2000-2001	:	486 ಪ್ರಕರಣಗಳು
3)	2001-2002	:	460 ಪ್ರಕರಣಗಳು
4)	1.4.2002 ರಿಂದ 20.6.2002ರವರೆಗೆ	:	148 ಪ್ರಕರಣಗಳು

ವರ್ಗವಾರು ದಾಖಲಾದ ಪ್ರಕರಣಗಳ ವಿವರಗಳನ್ನು ಅನುಬಂಧ-1,2,3 ಮತ್ತು 4ರಲ್ಲಿ ನೀಡಲಾಗಿದೆ.